KAHS200012172018

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಆಲೂರು.**

**ಉಪಸ್ಥಿತರುಃ– ಶ್ರೀಮತಿ ಸ್ನೇಹಾ ಎಂ.**
**ಬಿ.ಎ.,ಎಲ್‌ಎಲ್.ಬಿ.,**
**ಸಿವಿಲ್ ನ್ಯಾಯಾಧೀಶರು,**
**ಮತ್ತು ಪ್ರಥಮ ದರ್ಜೆ ನ್ಯಾಯಿಕ**
**ದಂಡಾಧಿಕಾರಿಗಳು, ಆಲೂರು.**

**ಸಿ.ಸಿ.ನಂ.388/2018**

**ದಿನಾಂಕಃ 03ನೇ ಜೂನ್ 2026**

ಪಿರ್ಯಾದುದಾರರುಃ ಸರ್ಕಾರಿ ಅಬಕಾರಿ ನಿರೀಕ್ಷಕರು,
ಆಲೂರು ಪೊಲೀಸ್ ಠಾಣೆ, ಆಲೂರು

(ಪ್ರತಿನಿಧಿಸುವವರು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)

- ವಿರುದ್ಧ–

ಆರೋಪಿಃ **ಶ್ರೀ ಸಂತೋಷ ಬಿನ್ ಅಬ್ಬಣ್ಣಶೆಟ್ಟಿ**
ಸುಮಾರು 27 ವರ್ಷ,
ವಾಸಃ– ಕಾಡ್ಲೂರು ಕೂಡಿಗೆ ಗ್ರಾಮ,
ಆಲೂರು ತಾಲ್ಲೂಕು,
ಹಾಸನ ಜಿಲ್ಲೆ.

(ಶ್ರೀ **ಟಿ.ಎಸ್.ಎಸ್.**, ಆರೋಪಿ ಪರ ವಕೀಲರು)

| | |
|---|---|
| 1. ಕೃತ್ಯ ಎಸಗಿದ ದಿನಾಂಕ | 24.04.2018 |
| 2. ಅಪರಾಧ ವರದಿ ಮಾಡಿದ ದಿನಾಂಕ | 24.04.2018 |
| 3. ಫಿರ್ಯಾದುದಾರ/ಬಾತ್ಮಿದಾರರ ಹೆಸರು | ಎಂ.ರಮಾಮಣಿ |
| 4. ಸಾಕ್ಷಿದಾರರ ವಿಚಾರಣೆ ಪ್ರಾರಂಭವಾದ ದಿನಾಂಕ | 14.07.2023 |
| 5. ಸಾಕ್ಷಿದಾರರ ವಿಚಾರಣೆ ಕೊನೆಗೊಂಡ ದಿನಾಂಕ | 25.09.2025 |
| 6. ದೂಷಿಸಲಾದ ಆರೋಪಗಳು | ಕರ್ನಾಟಕ ಅಬಕಾರಿ ಕಾಯ್ದೆ ಕಲಂ 13(1) (ಇ), 14, 15, 32(1) |
| 9. ಪಿಠಾಸೀನಾಧಿಕಾರಿಗಳ ಅಭಿಪ್ರಾಯಃ | ಆರೋಪಿಯನ್ನು ನಿರ್ದೋಷಿ ಎಂದು ಪರಿಗಣಿಸಿದೆ. |

**ತೀರ್ಪು**

ಈ ಪ್ರಕರಣವನ್ನು ಆಲೂರು ಪೊಲೀಸರು ಆರೋಪಿಯ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಕಲಂಃ 13(1)(ಇ), 14, 15, 32(1) ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳ ಕುರಿತು ಪ್ರಕರಣವನ್ನು ದಾಖಲಿಸಿರುತ್ತಾರೆ.

**2.** ಅಭಿಯೋಜನೆಯ ಪ್ರಕಾರ ದಿನಾಂಕಃ14.04.2018 ರಂದು ಸಂಜೆ ಸುಮಾರು 5-30 ಗಂಟೆ ಸಮಯದಲ್ಲಿ ವಿಧಾನ ಸಭಾ ಚುನಾವಣೆ 2018 ರ ಮಾದರಿ ನೀತಿ ಸಂಹಿತೆ ಹಿನ್ನಲೆಯಲ್ಲಿ ಆಲೂರು ತಾಲ್ಲೂಕು, ಕೆಂಚಮ್ಮನ ಹೊಸಕೋಟೆ ಹೋಬಳಿ, ಕಾಡ್ಲೂರು - ಕೂಡಿಗೆ ಗ್ರಾಮದಲ್ಲಿ ಗಸ್ತು ಕಾರ್ಯ ನಿರ್ವಹಿಸುತ್ತಿದ್ದಾಗ ಕಾಡ್ಲೂರು ಕೂಡಿಗೆ ಗ್ರಾಮದಿಂದ ಹೈದೂರು ಗ್ರಾಮಕ್ಕೆ ಹೋಗುವ ರಸ್ತೆ ಮೊರಿಯ ಕಟ್ಟೆಯ ಮೇಲೆ ಆರೋಪಿಯು ಒಂದು ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರ್ ನಲ್ಲಿ ಅಕ್ರಮವಾಗಿ 90 ಮಿಲಿಯ ಒರಿಜಿನಲ್ ಚಾಯ್ಸ್ ಎಕ್ಸ ಟ್ರಾ ಮಾಲ್ಟ್ ವಿಸ್ಕಿ ಎಂಬ ಹೆಸರಿನ 27 ಮಧ್ಯ ತುಂಬಿದ ಟೆಟ್ರಾ ಪ್ಯಾಕ್ ಗಳನ್ನು (2,430) ಮಧ್ಯವನ್ನು ಮಾರಾಟದ ಉದ್ದೇಶದಿಂದ ಹೊಂದಿರುವುದು

ದೃಢಪಟ್ಟಿರುವುದರಿಂದ ಆರೋಪಿಯ ವಿರುದ್ಧ ದೋಷರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**3.** ಆರೋಪಿಯು ತಮ್ಮ ವಕೀಲರ ಮೂಲಕ ನ್ಯಾಯಾಲಯದ ಮುಂದೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ತನಿಖಾಧಿಕಾರಿಯು ತನಿಖೆ ನಡೆಸಿ ಆರೋಪಿಯ ವಿರುದ್ಧ ಮೇಲ್ಕಾಣಿಸಿದ ಕಲಂಗಳ ಅಡಿಯಲ್ಲಿ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ನ್ಯಾಯಾಲಯವು ಕರ್ನಾಟಕ ಅಬಕಾರಿ ಕಾಯಿದೆ ಕಲಂಃ 32(1) ಸಹವಾಚಕ 38(ಎ) ಮತ್ತು 43(ಎ) ರಡಿಯಲ್ಲಿ ಅಂಶಗಳು ಕಂಡು ಬಂದ ಕಾರಣ ಸದರಿ ಕಲಂಗಳಿಗೆ ಸಂಭಂದಪಟ್ಟಂತೆ ಆರೋಪಿಯ ವಿರುದ್ಧ ಆರೋಪಣೆಯನ್ನು ಸಿದ್ಧಪಡಿಸಿ ಅವರಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಕೇಳಲಾಗಿ ಅವರು ಆರೋಪಣೆಯನ್ನು ಅಲ್ಲಗಳೆದಿರುತ್ತಾರೆ. ನ್ಯಾಯಾಲಯವು ಅಭಿಯೋಜನೆಯ ಸಾಕ್ಷಿದಾರರ ವಿಚಾರಣೆಗಾಗಿ ಸಮನ್ಸನ್ನು ಹೊರಡಿಸಿರುತ್ತದೆ.

**4.** ಅಭಿಯೋಜನೆಯು ತನ್ನ ಪ್ರಕರಣವನ್ನು ಸಾಬೀತುಪಡಿಸಲು 4 ಜನ ಸಾಕ್ಷಿದಾರರನ್ನು ಪಟ್ಟಿ ಮಾಡಿದ್ದು ಅದರಲ್ಲಿ ಚಾಸಾ-1 ರಿಂದ 3 ಮತ್ತು 5 ರವರನ್ನು ಫ್ರಾಸಾ-1 ರಿಂದ 4 ಎಂದು ವಿಚಾರಣೆ ಮಾಡಿ ನಿಪಿ-1 ರಿಂದ 6 ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತದೆ ಹಾಗೂ 27 ಟೆಟ್ರಾ ಪ್ಯಾಕೇಟ್‌ಗಳನ್ನು ಮು.ಮಾ-1 ಎಂದು ಗುರುತಿಸಿಕೊಂಡಿರುತ್ತದೆ.

**5.** ಅಭಿಯೋಜನೆಯ ಪರ ಸಾಕ್ಷಿದಾರರ ಸಾಕ್ಷ್ಯ ಮುಗಿದ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗಿದೆ. ಆರೋಪಿಯು ತಮ್ಮ ವಿರುದ್ಧದ ಸಾಕ್ಷ್ಯವನ್ನು ಅಲ್ಲಗಳೆದಿರುತ್ತಾರೆ ಹಾಗೂ ತಮ್ಮ ಪರವಾಗಿ ಯಾವುದೇ ಪ್ರತಿರಕ್ಷಣಾ ಸಾಕ್ಷ್ಯವನ್ನು ನ್ಯಾಯಾಲಯದ ಮುಂದೆ ಒದಗಿಸಿರುವುದಿಲ್ಲ.

**6.** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಹಾಗೂ ಆರೋಪಿಯ ಪರ ವಕೀಲರ ವಾದ ವಿವಾದಗಳನ್ನು ಆಲಿಸಲಾಯಿತು ಹಾಗೂ ಲಭ್ಯ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಯಿತು.

**7.** ಈ ಮೇಲೆ ಹೇಳಿದ ಪ್ರಕರಣದ ವಸ್ತುಸ್ಥಿತಿಗಳ ಆಧಾರದ ಮೇಲೆ ನ್ಯಾಯಾಲಯವು ಈ ಕೆಳಂಡ ಅಂಶಗಳನ್ನು ನಿರ್ಧರಿಸಬೇಕಾಗಿರುತ್ತದೆ.

1. ದಿನಾಂಕಃ 24.04.2018 ರಂದು ಸಂಜೆ ಸುಮಾರು 05.30 ಗಂಟೆ ಸಮಯದಲ್ಲಿ ಆಲೂರು ಪೋಲಿಸ್ ಠಾಣಾ ಸರಹದ್ದಿಗೆ ಸೇರಿದ ಆಲೂರು ತಾಲ್ಲೂಕು, ಕೆಂಚಮ್ಮನ ಹೊಸಕೋಟೆ ಹೋಬಳಿ, ಕಾಡ್ಲೂರು ಗ್ರಾಮದಿಂದ ಹೈದೂರು ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಆರೋಪಿಯು ಯಾವುದೇ ಪರವನಾಗಿ ಇಲ್ಲದೇ ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರ್ ನಲ್ಲಿ ಅಕ್ರಮವಾಗಿ 90 ಮಿಲಿಯ 26 ಒರಿಜಿನಲ್ ಚಾಯ್ಸ್ ಎಕ್ಸ್ ಟ್ರಾ ಮಾಲ್ಸ್ ಡಿಲೆಕ್ಸ್ ವಿಸ್ಕಿ ಎಂಬ ಹೆಸರಿನ 27 ಮಧ್ಯ ತುಂಬಿದ ಟೆಟ್ರಾ ಪ್ಯಾಕ್ ಗಳನ್ನು ಪರವಾನಾಗಿ ಇಲ್ಲದೇ ಮಾರಾಟಕ್ಕಾಗಿ ಇಟ್ಟುಕೊಂಡಿರುತ್ತಾರೆ. ಆದ್ದರಿಂದ ಆರೋಪಿಯು ಕರ್ನಾಟಕ ಅಬಕಾರಿ ಕಾಯಿದೆ ಕಲಂ 32(1) ಸಹವಾಚಕ 38(ಎ) ರನ್ವಯ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದಾಗಿ ಅಭಿಯೋಜನೆ ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ?

2. ಮೇಲೆ ಹೇಳಿದ ದಿನಾಂಕ ಹಾಗೂ ಸಮಯದಲ್ಲಿ ಆರೋಪಿಯು ಪರವಾನಗಿ ಇಲ್ಲದೇ 90 ಮಿಲಿಯ ಒರಿಜಿನಲ್ ಚಾಯ್ಸ್ ಎಕ್ಸ್ ಟ್ರಾ ಮಾಲ್ಸ್ ಡಿಲೆಕ್ಸ್ ವಿಸ್ಕಿ ಎಂಬ ಹೆಸರಿನ 27 ಮಧ್ಯ ತುಂಬಿದ ಟೆಟ್ರಾ ಪ್ಯಾಕ್ ಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಹೊಂದಿರುತ್ತಾರೆ. ಆದ್ದರಿಂದ ಆರೋಪಿಯು ಕರ್ನಾಟಕ ಅಬಕಾರಿ ಕಾಯಿದೆ ಕಲಂ 43(ಎ) ರನ್ವಯ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದಾಗಿ ಅಭಿಯೋಜನೆ ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ?

3. ಏನು ಆದೇಶ?

**8**. ಮೇಲ್ಕಂಡ ಅಂಶಗಳಿಗೆ ಈ ಕೆಳಗೆ ಕಾಣಿಸಿದ ಕಾರಣಗಳಿಗಾಗಿ ನನ್ನ ಉತ್ತರ ಈ ಕೆಳಗಿನಂತಿರುತ್ತದೆಃ

**ಅಂಶ ನಂ.1 ಮತ್ತು 2** : **ನಕಾರಾತ್ಮಕವಾಗಿ**
ಅಂಶ ನಂ.3: ಅಂತಿಮ ಆದೇಶದಂತೆ
ಕೆಳಕಂಡ ಕಾರಣಗಳ ಪ್ರಕಾರ

## ಕಾ ರ ಣ ಗ ಳು

**9.** **ಅಂಶ ನಂ.1 ಮತ್ತು 2:** ಅಭಿಯೋಜನೆಯು ಚಾಸಾ-1 ಮತ್ತು 2 ರವರನ್ನು ಪ್ರಾಸಾ-1 ಮತ್ತು 2 ಎಂದು ವಿಚಾರಣೆಗೆ ಒಳಪಡಿಸಿದಾಗ ಸದರಿಯವರು ಈ ಪ್ರಕರಣದ ಬಗ್ಗೆ ತಮಗೇನೂ ಗೊತ್ತಿಲ್ಲ ಮತ್ತು ಪೊಲೀಸರು ತಮ್ಮ ಸಮಕ್ಷಮ ಯಾವುದೇ ಮಧ್ಯವನ್ನು ಅಮಾನತ್ತುಪಡಿಸಿಕೊಂಡಿಲ್ಲವೆಂದು ನುಡಿದಿರುತ್ತಾರೆ. ಮಹಜರ್ ನ್ನು ನಿಪಿ-1 ಎಂದು, ಸಾಕ್ಷಿಗಳ ಸಹಿಗಳನ್ನು ನಿಪಿ-1(ಎ) ಮತ್ತು ನಿಪಿ-1(ಬಿ) ಎಂದು, ಮಾದರಿ

ಸೀಲಿನ ನಕಲನ್ನು ನಿಪಿ-2 ಎಂದು, ಅದರಲ್ಲಿರುವ ಸಹಿಯನ್ನು ನಿಪಿ-2(ಎ) ಮತ್ತು 2(ಬಿ) ಎಂದು ಗುರುತಿಸಲಾಗಿರುತ್ತದೆ. ನಿಪಿ-1 ರಲ್ಲಿ ಏನು ಬರೆಯಾಲಾಗಿದೆ ಗೊತ್ತಿಲ್ಲ ಎಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ.

**10.** ಅಭಿಯೋಜನೆಯು ಚಾಸಾ-3 ಮತ್ತು ಚಾಸಾ-5 ರವರನ್ನು ಪ್ರಾಸಾ-3 ಮತ್ತು 4 ಎಂದು ವಿಚಾರಣೆಗೆ ಒಳಪಡಿಸಿದಾಗ ಸದರಿಯವರು ದಿ:24.04.2018 ರಂದು ಸಂಜೆ 5.30 ರ ಸಮಯದಲ್ಲಿ ವಿಧಾನ ಸಭಾ ಚುನಾವಣೆ ಮಾದರಿ ನೀತಿ ಸಂಹಿತೆ ಹಿನ್ನಲೆಯಲ್ಲಿ ಆಲೂರು ತಾಲ್ಲೂಕು, ಕೆ.ಹೊಸಕೋಟೆ ಹೋಬಳಿ, ಕಾಡ್ಲೂರು ಕೂಡಿಗೆ ಗ್ರಾಮದಲ್ಲಿ ಅಬಕಾರಿ ನಿರೀಕ್ಷಕರಾದ ಚಾಸಾ-2, 4 ಮತ್ತು 7 ರವರೊಂದಿಗೆ ಗಸ್ತು ಕಾರ್ಯ ನಿರ್ವಹಿಸುತ್ತಿದ್ದಾಗ ಅಬಕಾರಿ ನಿರೀಕ್ಷಕರಿಗೆ ಬಂದ ಖಚಿತ ಮಾಹಿತಿ ಮೇರೆಗೆ ಸದರಿ ಗ್ರಾಮದಲ್ಲಿದ್ದ ಚಾಸಾ-1 ಮತ್ತು 2 ರವರನ್ನು ಪಂಚರನ್ನಾಗಿ ನಿಯೋಜಿಸಿಕೊಂಡು ಕಾಡ್ಲೂರು ಕೂಡಿಗೆಯಿಂದ ಹೈದೂರು ಗ್ರಾಮದ ಕಡೆ ರಸ್ತೆಯಲ್ಲಿರುವ ಸರ್ಕಾರಿ ಮೋರಿಯ ಹತ್ತಿರ ತೆರಳಿದಾಗ ಒಬ್ಬ ಅಸಾಮಿ ಒಂದು ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರನ್ನು ಹಿಡಿದುಕೊಂಡು ಸಮವಸ್ತ್ರದಲ್ಲಿದ್ದ ತಮ್ಮನ್ನು ನೋಡಿ ಓಡಲು ಯತ್ನಿಸಿದಾಗ ಆತನನ್ನು ಸುತ್ತುವರಿದು ಹಿಡಿದು ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಲಾಗಿ ಅದರಲ್ಲಿ ಮಧ್ಯ ತುಂಬಿದ ಟೆಟ್ರಾ ಪ್ಯಾಕೇಟ್ ಗಳು ಕಂಡು ಬಂದಿದ್ದು, ಅವುಗಳನ್ನು ಎಣಿಕೆ ಮಾಡಿ ನೋಡಲಾಗಿ 90 ಎಂ.ಎಲ್ ನ 27 ಒರಿಜಿನಲ್ ಚಾಯ್ಸ್ ಡಿಲೆಕ್ಸ್ ವಿಸ್ಕಿ ಎಂಬ ಹೆಸರಿನ ಮಧ್ಯ ತುಂಬಿದ ಟೆಟ್ರಾ ಪ್ಯಾಕ್ ಗಳು ಇದ್ದು, ಅವುಗಳನ್ನು ಹೊಂದಲು ಪರವಾನಗಿಯನ್ನು ಕೇಳಲಾಗಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿದ ಕಾರಣ ಇದ್ದು ಶಿಕ್ಷಾರ್ಹ

ಅಪರಾಧವೆಂದು ಅಸಾಮಿಗೆ ತಿಳಿಸಿ ಮಧ್ಯವನ್ನು ವಶಕ್ಕೆ ಪಡೆದು, ಆತನನ್ನು ದಸ್ತಗಿರಿ ಮಾಡಿ, ಆತನ ಹೆಸರು ಮತ್ತು ವಿಳಾಸ ಕೇಳಲಾಗಿ ಸಂತೋಷ್ ಬಿನ್ ಅಚ್ಚಣ್ಣಶೆಟ್ಟಿ ಅಲಿಯಾಸ್ ಚಂದ್ರಶೇಖರ ಎಂದು ತಿಳಿಸಿರುತ್ತಾರೆ. ದೊರೆತ ಮಧವನ್ನು ಅದೇ ಪ್ಲಾಸ್ಟಿಕ್ ಕವರಿನಲ್ಲಿ ಹಾಕಿ ರಾಸಾಯಿನಿಕ ಪರೀಕ್ಷೆಗಾಗಿ ಮಾದರಿ ತೆಗೆದು ದಾರ ಕಟ್ಟಿ ಇಲಾಖಾ ಸೀಲ್ ನಂ.339 ರಿಂದ ಹರಗನ್ನು ಹಾಕಿ ಸೀಲ್ ಮಾಡಲಾಯಿತು ಮತ್ತು ಮಾದರಿ ಸೀಲಿನ ನಕಲು ಮತ್ತು ಚೀಟಿಗಳನ್ನು ತಯಾರಿಸಿ ಅವುಗಳಿಗೆ ಪಂಚರ ಸಹಿಗಳನ್ನು ಪಡೆದು ಮಾದರಿ ತೆಗೆದ ಪ್ಯಾಕೆಟ್ ಗಳ ಮೇಲೆ ಚೀಟಿ ಅಂಟಿಸಿ, ಸ್ಥಳದಲ್ಲಿ ಮಹಜರ್ ಕ್ರಮವನ್ನು ಸಂಜೆ ಸುಮಾರು 5-45 ರಿಂದ 6–30 ರವರೆಗೆ ಜರುಗಿಸಿದ್ದು ಮತ್ತು ಫ್ರಾಸಾ–5 ರವರು ಪ್ರ.ವ.ವರದದಿಯನ್ನು ದಾಖಲಿಸಿರುವುದಾಗಿ ಹಾಗೂ ಚಾಸಾ–7 ರವರು ಮರಣ ಹೊಂದಿರುವುದಾಗಿ ನುಡಿದಿರುತ್ತಾರೆ. ಸಾಕ್ಷಿಗಳ ಸಹಿಯನ್ನು ನಿಪಿ–1(ಸಿ) ಮತ್ತು 1(ಡಿ) ಎಂದು, 27 ಟೆಟ್ರಾಪ್ಯಾಕ್‌ಗಳನ್ನು ಒಟ್ಟಾಗಿ ಮು.ಮಾ–1 ಎಂದು ಗುರುತಿಸಲಾಗಿರುತ್ತದೆ. ಪ್ರಥಮ ವರ್ತಮಾನ ವರದಿಯನ್ನು ನಿಪಿ–5 ಎಂದು ಸಾಕ್ಷಿಯ ಸಹಿಯನ್ನು ನಿಪಿ–5(ಎ) ಎಂದು ಗುರುತಿಸಲಾಗಿರುತ್ತದೆ.

**11.** ಫ್ರಾಸಾ–3 ರವರನ್ನು ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ ಸದರಿಯವರು ಯಾವ ಸ್ಥಳದಲ್ಲಿ ಆರೋಪಿಯನ್ನು ನೋಡಿದ್ದೀರಾ ಎಂದರೆ ಕಾಡ್ಲೂರು ಕೂಡಿಗೆ, ಸದರಿ ಸ್ಥಳ 3 ರಸ್ತೆ ಕೂಡುತ್ತದೆ ಎಂದರೆ ಸರಿ. ಅಂಗಡಿ ಮಳಿಗೆಗಳಿವೆ ಎಂದರೆ ಸರಿ. ಆರೋಪಿಯನ್ನು ಹೈದೂರು ಕಡೆಗೆ ಹೋಗುವ ರಸ್ತೆಯಲ್ಲಿ ನೋಡಿರುತ್ತೇವೆ. ಪ್ಲಾಸ್ಟಿಕ್ ಚೀಲವನ್ನು ಅಮಾನತ್ತು ಪಡಿಸಿಕೊಂಡಿದ್ದು, ಚೀಲವು ರಸ್ತೆಯ

ಎಡಭಾಗದಲ್ಲಿತ್ತು, ಮೊದಲು ಚೀಲವನ್ನು ಯಾರು ತೆಗೆದು ನೋಡಿರುತ್ತಾರೆ ಎಂದರೆ ಚಾಸಾ-4, ಮಹಜರಿನಲ್ಲಿ ಟೆಟ್ರಾ ಪ್ಯಾಕ್ ಗಳ ತಯಾರಿಕಾ ದಿನ ನಮೂದಿಸಿರುವುದಿಲ್ಲ. ಸ್ಥಳದಲ್ಲಿದ್ದ ಪಂಚರನ್ನು ಬರಮಾಡಿಕೊಂಡಿದ್ದು, ಆರೋಪಿ ಯಾವುದೇ ಚೀಲವನ್ನು ಎಸೆದಿರುವುದಿಲ್ಲ ಮತ್ತು ಅದನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಮಹಜರ್ ಮು.ಮಾ-1 ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ ಎಂದು ನುಡಿದಿರುತ್ತಾರೆ.

**12.** ಫ್ರಾಸಾ-4 ರವರನ್ನು ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ ಸದರಿಯವರು ನಿಪಿ-1 ರಲ್ಲಿ ಪ್ರಕರಣದ ಸಂಖ್ಯೆಯನ್ನು ತಿಳಿಸಿದ್ದೀರಾ ಎಂದರೆ ತಿಳಿಸಿರುವುದಿಲ್ಲ. ಮಹಜರ್ ಮಾಡಿದ ಸಮಯದಲ್ಲಿ ಸಾಕ್ಷಿದಾರರ ಸಹಿ ಪಡೆದಿದ್ದು, ಮು.ಮಾ-1 ಬ್ಯಾಚ್ ನಂಬರ್ ಮತ್ತು ತಯಾರಿಕಾ ದಿನವನ್ನು ನಿಪಿ-1 ರಲ್ಲಿ ತೋರಿಸಿದ್ದೀರಾ ಎಂದರೆ ಇಲ್ಲ, ಆಲೂರು ಕಾಡ್ಲೂರಿನಲ್ಲಿ ಗಸ್ತಿನಲ್ಲಿದ್ದಾಗ ಸಂಜೆ ಸುಮಾರು 5-15 ಕ್ಕೆ ಮಾಹಿತಿ ಬಂದಿದ್ದು, ನಿಪಿ-1 ರಡಿಯಲ್ಲಿ ಆರೋಪಿಯ ವಶದಿಂದ ಮು.ಮಾ-1ನ್ನು ಸ್ಥಳಲ್ಲಿ ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ ಎಂದು ನುಡಿದಿರುತ್ತಾರೆ.

**13**. ಅಭಿಯೋಜನೆಯ ಪ್ರಕಾರ ಪಂಚರಾದ ಫ್ರಾಸಾ- 1 ಮತ್ತು 2 ರವರ ಸಮಕ್ಷಮ ದಾಳಿ ಮಾಡಿ ನಿಪಿ-1 ಪಂಚನಾಮೆಯಡಿಯಲ್ಲಿ ಮು.ಮಾ-1ನ್ನು

ಅಮಾನತ್ತುಪಡಿಸಿಕೊಳ್ಳಲಾಗಿದೆ ಎನ್ನುವುದು ಅಭಿಯೋಜನೆಯ ನಿಲುವಾಗಿದ್ದರೂ ಕೂಡ ನಿಪಿ-1 ರಲ್ಲಿ ಪಂಚರ ಸಾಕ್ಷಿದಾರರಾದ ಫ್ರಾಸಾ-1 ಮತ್ತು 2 ರವರು ಈ ಬಾಬ್ತು ಅಭಿಯೋಜನೆಗೆ ಸಂಪೂರ್ಣ ಪ್ರತಿಕೂಲವಾಗಿ ಸಾಕ್ಷಿ ನುಡಿದಿರುತ್ತಾರೆ. ಇವರನ್ನು ಪ್ರತಿಕೂಲ ಸಾಕ್ಷಿಗಳು ಎಂದು ಪರಿಗಣಿಸಿದ ಸರ್ಕಾರಿ ವಕೀಲರು ನ್ಯಾಯಾಲಯದ ಅನುಮತಿಯ ಮೇರೆಗೆ ವಿವರವಾಗಿ ಪಾಟೀ ಸವಾಲಿಗೆ ಗುರಿಪಡಿಸಿದ್ದರೂ ಕೂಡಾ ಅಭಿಯೋಜನೆಯ ನಿಲುವಿಗೆ ಪೂರಕವಾಗುವಂತಹ ಯಾವುದೇ ಮಹತ್ವದ ಒಪ್ಪಿಗೆಗಳನ್ನು ಹೊರತರಿಸಿರುವುದಿಲ್ಲ. ಇವರನ್ನು ಹೊರತುಪಡಿಸಿ ಬೇರೆ ಯಾವುದೇ ಸ್ವತಂತ್ರ ಮತ್ತು ಸ್ವಾಭಾವಿಕ ಸಾಕ್ಷಿದಾರರನ್ನು ಸಾಕ್ಷಿ ಪಟ್ಟಿಯಲ್ಲಿ ಕೂಡಾ ಹೆಸರಿಸಲಾಗಿಲ್ಲ ಹಾಗೂ ಘಟನಾ ಸ್ಥಳದ ಆಸುಪಾಸಿನಲ್ಲಿ ಲಭ್ಯವಿರಬಹುದಾದ ಯಾವುದೇ ಸ್ವತಂತ್ರ ಹಾಗೂ ಸ್ವಾಭಾವಿಕ ಸಾಕ್ಷಿದಾರರನ್ನು ತನಿಖಾಧಿಕಾರಿಯು ವಿಚಾರಿಸಿ ಹೇಳಿಕೆ ಪಡೆದುಕೊಂಡಿರುವುದಿಲ್ಲ. ಪ್ರಕರಣದ ಮುಖ್ಯ ಸಾಕ್ಷಿದಾರರಾದ ಫ್ರಾಸಾ-3 ಮತ್ತು 4 ರವರ ಸಾಕ್ಷ್ಯವು ಮಾತ್ರವೇ ನ್ಯಾಯಾಲಯದ ಮುಂದೆ ಲಭ್ಯವಿದ್ದು ಸದರಿಯವರು ಆರಕ್ಷಕ ಸಾಕ್ಷಿದಾರರಾಗಿದ್ದು, ಸಹಜವಾಗಿ ಇವರ ಸಾಕ್ಷ್ಯವು ಅಭಿಯೋಜನೆಗೆ ಪೂರಕವಾಗಿರುವ ಸಂಗತಿಯನ್ನು ನ್ಯಾಯಾಲಯವೇ ಪರಿಗಣಿಸಬಹುದಾಗಿದೆ. ಈ ಎಲ್ಲಾ ಅಂಶಗಳನ್ನು ಜೊತೆ ಜೊತೆಯಾಗಿ ಪರಿಗಣಿಸುವಾಗ ಖಚಿತೆಯಿಂದ ಕೂಡಿರದ ಆರಕ್ಷಕ ಸಾಕ್ಷಿದಾರರ ಸಾಕ್ಷ್ಯದ ಆಧಾರದಲ್ಲಿ ಆರೋಪಿಯ ವಿರುದ್ಧ ಆರೋಪ ನಿರ್ಣಯ ಕೈಗೊಳ್ಳುವುದು ಸಾಧ್ಯವಿರುವುದಿಲ್ಲ. ಲಭ್ಯವಿರುವ ಯಾವುದೇ ಸ್ವತಂತ್ರ ಹಾಗೂ ಸ್ವಾಭಾವಿಕ ಸಾಕ್ಷಿದಾರರನ್ನು ತನಿಖಾಧಿಕಾರಿಯು ವಿಚಾರಿಸಿ ಹೇಳಿಕೆ ಪಡೆದುಕೊಂಡಿರುವುದಿಲ್ಲ.

**14.** ಮಾದರಿ ದ್ರವ್ಯದ ರಾಸಾಯನಿಕ ವಿಶ್ಲೇಷಣಾ ವರದಿಯನ್ನು ನಿಪಿ-6 ರಂತೆ ಗುರುತಿಸಿಕೊಳ್ಳಲಾಗಿದೆ. ಸದರಿ ದಾಖಲೆಯ ವಿವರಗಳ ಪ್ರಕಾರ ಮಾದರಿ ದ್ರವ್ಯದಲ್ಲಿ ಮದ್ಯಸಾರದ ಅಂಶವಿರುವುದು ಕಂಡುಬರುತ್ತದೆ. ಆದರೆ ಮಾದರಿ ದ್ರವ್ಯವನ್ನು ನಿಪಿ-1 ರಡಿಯಲ್ಲಿ ವಶಪಡಿಸಿಕೊಳ್ಳಲಾಗಿದೆ ಎನ್ನುವ ಸಂಗತಿಯನ್ನು ಖಚಿತವಾಗಿ ನಿರೂಪಿಸಲು ಅಭಿಯೋಜನೆ ವಿಫಲವಾಗಿರುವುದರಿಂದ ನಿಪಿ-6ರ ವಿವರಗಳನ್ನು ಆರೋಪ ನಿರ್ಣಯದಲ್ಲಿ ಪೂರಕ ಸಾಕ್ಷ್ಯವನ್ನಾಗಿ ಬಳಸಿಕೊಳ್ಳಲು ಆಸ್ಪದ ಇರುವುದಿಲ್ಲ. ಸದರಿ ಸಂಗತಿಯು ಅಭಿಯೋಜನೆಯ ನಿಲುವಿನ ಮೇಲೆಯೇ ಸಂಶಯ ಮೂಡಿಸುತ್ತದೆ. ಆದುದರಿಂದ ಪುಷ್ಠೀಕರಿಸಲ್ಪಡದ ಪ್ರಾಸಾ-3 ಮತ್ತು 4 ರವರ ಸಮಕ್ಷಮ ಸಾಕ್ಷ್ಯದ ಆಧಾರದಲ್ಲಿ ನಿಪಿ-1ರ ಅಡಿಯಲ್ಲಿ ಮದ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ಜಪ್ತುಪಡಿಸಿಕೊಳ್ಳಲಾಗಿದೆ ಎನ್ನುವುದಾಗಿ ಅಭಿಪ್ರಾಯ ಪಡುವುದು ಅಪಾಯಕಾರಿಯಾಗಿ ಕಂಡುಬರುತ್ತದೆ. ಹೀಗಾಗಿ ಪ್ರಕರಣದ ಒಟ್ಟಾರೆ ಸಂದರ್ಭಗಳ ಹಿನ್ನೆಲೆಯಲ್ಲಿ ಕೇವಲ ಆರಕ್ಷಕ ಸಾಕ್ಷಿದಾರರ ಸಾಕ್ಷ್ಯವನ್ನು ಆಧರಿಸಿ ಆರೋಪಿ ಮತ್ತು ಜಪ್ತುಪಡಿಸಿಕೊಳ್ಳಲಾದ ಮದ್ಯದ ಟೆಟ್ರಾ ಪ್ಯಾಕೆಟ್ ಗಳು ನಡುವಿನ ಸಂಬಂಧ ರುಜುವಾತಾಗಿದೆ ಎಂದು ಅಭಿಪ್ರಾಯ ಪಡುವುದು ಅಪಾಯಕಾರಿಯಾಗಿ ಕಂಡುಬರುತ್ತದೆ.

**15.** ಒಟ್ಟಾರೆಯಾಗಿ ನ್ಯಾಯಾಲಯದ ಮುಂದೆ ಲಭ್ಯವಿರುವ ಸಾಕ್ಷ್ಯಾಧಾರಗಳನ್ನು ಗಮನಿಸುವಾಗ ಆರೋಪಿಯು ಆಪಾಧಿಸಲಾದ ಕೃತ್ಯವನ್ನು ಎಸಗಿರುತ್ತಾರೆ ಎನ್ನುವ ಸಂಗತಿಯು ರುಜುವಾತಾಗಿಲ್ಲ ಎನ್ನುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಆದುದರಿಂದ ಇನ್ನೂ ಹೆಚ್ಚಿನ ಚರ್ಚೆಗೆ ಆಸ್ಪದ ನೀಡದೇ ಆರೋಪಿಯ ವಿರುದ್ಧ ಹೊರಿಸಲಾದ

ದೋಷಾರೋಪಣೆಯನ್ನು ಸಂಶಯಾತೀತವಾಗಿ ರುಜುವಾತುಪಡಿಸುವಲ್ಲಿ ಅಭಿಯೋಜನೆ ವಿಫಲವಾಗಿದೆ ಎನ್ನುವುದಾಗಿ ಅಭಿಪ್ರಾಯಪಟ್ಟಿದ್ದು, ಈ ಮೇಲಿನ ಅಂಶಗಳನ್ನು **ನಕಾರಾತ್ಮಕವಾಗಿ** ಉತ್ತರಿಸಿರುತ್ತೇನೆ.

16. **ಅಂಶ ನಂ.3:** ಮೇಲೆ ಹೇಳಿದ ವಸ್ತುಸ್ಥಿತಿ ಮತ್ತು ಕಾರಣಗಳ ಆಧಾರದ ಮೇಲೆ ಈ ಕೆಳಗಿನಂತೆ ಆದೇಶ ಮಾಡಲಾಗಿದೆಃ

ಆದೇಶ

ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರನ್ವಯ ಆರೋಪಿಯನ್ನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32(1) ಸಹವಾಚಕ 38(ಎ) ಮತ್ತು 43(ಎ) ರಡಿಯಲ್ಲಿ ಶಿಕ್ಷಿಸಬಹುದಾದ ಅಪರಾಧಗಳಿಂದ ನಿರ್ದೋಷಿ ಎಂದು ತೀರ್ಮಾನಿಸಿ ಬಿಡುಗಡೆ ಮಾಡಲಾಗಿದೆ.

ದಂಡ ಪ್ರಕ್ರಿಯಾ ಸಂಹಿತೆಯ ಕಲಂ 437(ಎ) ಅಡಿಯಲ್ಲಿ ಆರೋಪಿಯು ಬರೆದುಕೊಟ್ಟ ಜಾಮೀನು ಮುಚ್ಚಳಿಕೆ ಮುಂದಿನ 6 ತಿಂಗಳುಗಳವರೆಗೆ ಚಾಲ್ತಿಯಲ್ಲಿ ಇರತಕ್ಕದ್ದು, ನಂತರ ಆರೋಪಿತನು ಬರೆದುಕೊಟ್ಟ ಜಾಮೀನು ಮುಚ್ಚಳಿಕೆಯನ್ನು ರದ್ದುಪಡಿಸಲಾಗಿದೆ.

ಮು.ಮಾ-1ನ್ನು ಉಪಯೊಗಕ್ಕೆ ಬಾರದಂತಹ ವಸ್ತುಗಳಾಗಿರುವ ಕಾರಣ ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸತಕ್ಕದ್ದು.

*(ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರಕ್ಕೆ ಉಕ್ತಲೇಖಿಸಿ ಅವರು ಅದನ್ನು ಲಿಪ್ಯಂತರ ಮಾಡಿದ ನಂತರ ನಾನು ತಿದ್ದಿ ಸಹಿ ಮಾಡಿ ದಿನಾಂಕಃ* **03ನೇ ಜೂನ್ 2026** *ರ ಈ ದಿನ ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಿರುತ್ತೇನೆ)*

(ಸ್ನೇಹಾ ಎಂ.)
ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಆಲೂರು.

# ಅನುಬಂಧ

**ಅಭಿಯೋಜನೆ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿಃ**

| | | |
|---|---|---|
| ಪ್ರಾಸಾ–1 | : | ರಾಜು |
| ಪ್ರಾಸಾ–2 | : | ವಿಕಾಸ್ |
| ಪ್ರಾಸಾ–3 | : | ಹರೀಶ್ |
| ಪ್ರಾಸಾ–4 | : | ರಮಾಮಣಿ |

**ಅಭಿಯೋಜನೆ ಪರ ನಿಶಾನಿಸಲಾದ ದಾಖಲೆಗಳ ಪಟ್ಟಿಃ**

| | | |
|---|---|---|
| ನಿಪಿ–1 | : | ಮಹಜರ್ |
| ನಿಪಿ–1(ಎ ರಿಂದ ಸಿ ) | : | ಸಹಿಗಳು |
| ನಿಪಿ–2 | : | ಮಾದರಿ ಸೀಲಿನ ನಕಲು |
| ನಿಪಿ–2(ಎ ಮತ್ತು ಬಿ ) | : | ಸಹಿಗಳು |
| ನಿಪಿ–3 ಮತ್ತು 4 | : | ಹೇಳಿಕೆಗಳು |
| ನಿಪಿ–5 | : | ಪ್ರಥಮ ವರ್ತಮಾನ ವರದಿ. |
| ನಿಪಿ–5(ಎ) | : | ಸಹಿ |
| ನಿಪಿ–6 | : | ರಸಾಯನಿಕ ವಿಶ್ಲೇಷಣಾ ವರದಿ |

**ಅಭಿಯೋಜನೆ ಪರ ಗುರುತಿಸಲಾದೆ ಮುದ್ದೆಮಾಲುಗಳ ಪಟ್ಟಿಃ**

| | | |
|---|---|---|
| ಮು.ಮಾ–1 | : | 27 ಟೆಟ್ರಾ ಪ್ಯಾಕೆಟ್ ಗಳು |

**ಆರೋಪಿ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ:**

-ಇಲ್ಲ-

**ಆರೋಪಿ ಪರ ನಿಶಾನಿಸಲಾದ ದಾಖಲೆಗಳ ಪಟ್ಟಿ:**

-ಇಲ್ಲ-

**ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ಆಲೂರು.**